8. ಘಟಕವು ಪುನ:ಶ್ಚೇತನಗೊಂಡ ನಂತರ ಮುಂದೆ ಪಾವತಿಸಬೇಕಾದ ವಾಣಿಜ್ಯ ತೆರಿಗೆಯನ್ನು ಬಡ್ಡಿ ಇಲ್ಲದೆ ಮೂರು ವರ್ಷಗಳವರೆಗೆ ಮುಂದೂಡಲು ಅವಕಾಶ. ಹಾಗೂ ಈ ಮೊತ್ತವನ್ನು ಮೂರು ವಾರ್ಷಿಕ ಕಂತುಗಳಲ್ಲಿ ಪ್ರಸ್ತುತ ತೆರಿಗೆಯೊಡನೆ ಪಾವತಿಸಬೇಕಾಗುತ್ತದೆ.

ಈ) ಸಹಾಯಧನ ಮಂಜೂರಾತಿಗಾಗಿ ಪ್ರಕರಣಗಳು ಬಾಕಿ ಇರುವುದಿಲ್ಲ. ದಿನಾಂಕ 31–3–04ರಲ್ಲಿ ಇದ್ದಂತೆ 19,555 ಕೈಗಾರಿಕಾ ಘಟಕಗಳಿಗೆ ಮಂಜೂರಾದ ಸಹಾಯಧನ ಬಾಕಿ ರೂ. 429.43 ಕೋಟಿಗಳನ್ನು ಬಿಡುಗಡೆ ಮಾಡಬೇಕಾಗಿರುತ್ತದೆ.

ಉ) ಮೇಲ್ಕಂಡ 19,555 ಕೈಗಾರಿಕೆ ಘಟಕಗಳಿಗೆ ಸಹಾಯಧನ ರೂ. 429.43 ಕೋಟಿಗಳನ್ನು ಮಂಜೂರು ಮಾಡಲಾಗಿದೆ. ಈಗಾಗಲೇ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ರೂ. 81.00 ಕೋಟಿಗಳನ್ನು ಬಾಂಡ್‌ಗಳ ಮೂಲಕ ಹಣ ಸಂಗ್ರಹಿಸಿದ್ದು, ಮಂಜೂರಾದ ಘಟಕಗಳಿಗೆ ವಿತರಿಸಲು ಕ್ರಮ ಜರುಗಿಸಲಾಗುತ್ತಿದೆ.

ಊ) ಅನುದಾನದ ಕೊರತೆಯಿಂದ ಕಾಲಕಾಲಕ್ಕೆ ಬಿಡುಗಡೆಯಾಗದೇ ಇರುವ ಕಾರಣ ಸಹಾಯಧನ ಬಿಡುಗಡೆಯಲ್ಲಿ ವಿಳಂಭವಾಗಿರುತ್ತದೆ.

ಋ) ದಿನಾಂಕ 31–3–04ರಲ್ಲಿದ್ದಂತೆ ಅರಸೀಕೆರೆ ತಾಲ್ಲೂಕಿನಲ್ಲಿ 1,447 ಸಣ್ಣ ಕೈಗಾರಿಕೆಗಳು ನೋಂದಣಿಯಾಗಿರುತ್ತದೆ. ಮೂರನೇ ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ಗಣತಿ ವರದಿ ಪ್ರಕಾರ ಇವುಗಳಲ್ಲಿ 113 ಘಟಕಗಳು ಮುಚ್ಚಿರುವುದಾಗಿ ತಿಳಿದು ಬಂದಿದೆ.

ಅರಸೀಕೆರೆ ತಾಲ್ಲೂಕಿನಲ್ಲಿ 132 ಸಣ್ಣ ಕೈಗಾರಿಕೆಗಳಿಗೆ ರೂ. 1,30,23,050–00 ಸಹಾಯಧನ ಬಿಡುಗಡೆಗೆ ಬಾಕಿ ಉಳಿದಿರುತ್ತದೆ.

659(485) : ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಬಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿರಾಜಪೇಟೆ ನಗರದಲ್ಲಿ ಕಳೆದ ಮೂರು ವರ್ಷದ ಹಿಂದೆ ನಿರ್ಮಿಸಿದ ಕಾಂಕ್ರೀಟ್ ರಸ್ತೆ ಕಳಪೆ ಕಾಮಗಾರಿಯಿಂದ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಸರ್ಕಾರ ಇವುಗಳ ದುರಸ್ಥಿಗೆ ಯಾವ ಕ್ರಮ ಕೈಗೊಂಡಿದೆ;

ಇ) ಈ ಕಾಮಗಾರಿಗಾಗಿ ಸರ್ಕಾರ ವೆಚ್ಚ ಮಾಡಿದ ಹಣವೆಷ್ಟು; ಮತ್ತು ಯಾವ ಸಂಸ್ಥೆಯ ಮೂಲಕ ಈ ಕಾಮಗಾರಿಗಳನ್ನು ಮಾಡಿಸಲಾಗಿದೆ?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು)

ಅ) ಹೌದು.

ಆ) ಈ ಬಗ್ಗೆ ಕಾಮಗಾರಿಯನ್ನು ನಿರ್ವಹಿಸಿದ ಮೆ: ಚಂದ್ರಗಿರಿ ಕನ್ಸಸ್ಟ್ರಕ್ಷನ್ ಕಂ. ಲಿಮಿಟೆಡ್ ಇವರ ವೆಚ್ಚದಲ್ಲಿಯೇ ಆಗಿರುವ ಲೋಪವನ್ನು ಸರಿಪಡಿಸಲು ಕ್ರಮ ವಹಿಸಲಾಗಿದೆ.

ಇ) ಈ ಕಾಮಗಾರಿಗೆ ರೂ.25.00 ಲಕ್ಷಗಳಷ್ಟು ವೆಚ್ಚವಾಗಿದ್ದು ಇದನ್ನು ಹುಡ್ಕೋ ಸಾಲದ ನೆರವಿನಿಂದ ಭರಿಸಲಾಗಿದೆ. ಈ ಕಾಮಗಾರಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರು ಮೆ: ಚಂದ್ರಗಿರಿ ಕನ್ಸಸ್ಟ್ರಕ್ಷನ್ಸ್ ಕಂ. ಲಿಮಿಟೆಡ್‌ರವರ ಮೂಲಕ ಮಾಡಿಸಿದ್ದಾರೆ.

660(881) : ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿರಾಜಪೇಟೆ ನಗರಕ್ಕೆ ಭೇತ್ರಿ ಬಳಿಯಿರುವ ಕಾವೇರಿ ನದಿಯಿಂದ ನೀರು ಸರಬರಾಜು ಮಾಡುವ ಯೋಜನೆಯನ್ನು ಸಮರ್ಪಕವಾಗಿ ಯೋಜಿಸದೆ ಇರುವುದರಿಂದ ಕೋಟ್ಯಾಂತರ ರೂಪಾಯಿ ವೆಚ್ಚದ ಈ ಯೋಜನೆ ಇನ್ನೂ ಪೂರ್ಣ ಆಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದರೆ, ಈ ರೀತಿಯ ಅಸಮರ್ಪಕ ಯೋಜನೆಗೆ ಕಾರಣಕರ್ತರಾದವರು ಯಾರು; ಮತ್ತು ಅವರ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ;

ಇ) ಈವರೆವಿಗೂ ಈ ಯೋಜನೆಗಾಗಿ ಎಷ್ಟು ಹಣ ವೆಚ್ಚ ಮಾಡಲಾಗಿದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ವಿರಾಜಪೇಟೆ ನೀರು ಸರಬರಾಜು ಯೋಜನೆಯನ್ನು ಕಾವೇರಿ ನದಿ ಮೂಲದಿಂದ ರೂ.260.00 ಲಕ್ಷಗಳಿಗೆ ತಯಾರಿಸಲಾಗಿದೆ. ಸದರಿ ಯೋಜನೆಯಡಿ 2031ನೇ ಇಸವಿಗೆ ಉದ್ದೇಶಿತ 24,000 ಜನಸಂಖ್ಯೆಗೆ ದಿನಂಪ್ರತಿ ತಲಾ 70 ಲೀಟರ್ ನೀರು ಪೂರೈಸಲು ವಿನ್ಯಾಸಿಸಲಾಗಿದೆ. ಯೋಜಿಸಿದಂತೆ ವಿರಾಜಪೇಟೆ ನೀರು ಸರಬರಾಜು ಯೋಜನೆಯಡಿ ಮೂಲ ಸ್ಥಾವರ, 200 ಮೀ.ಮೀ. ವ್ಯಾಸದ ಏರು ಕೊಳವೆ ಮಾರ್ಗ, ಜಲಶುದ್ಧೀಕರಣಗಾರದ ಪುನ:ಶ್ಚೇತನ, ಫೀಡರ್ ಮೈನ್ ಹಾಗೂ ವಿತರಣಾ ಕೊಳವೆ ಜಾಲವನ್ನು ಸಮರ್ಪಕವಾಗಿ ಪೂರ್ಣಗೊಳಿಸಿ, ಈ ಯೋಜನೆಯಲ್ಲಿ ದಿನಾಂಕ 30–3–2004ರಂದು ಚಾಲನೆಗೊಳಿಸಲಾಗಿದೆ.

ಆ) ಉದ್ಭವಿಸುವುದಿಲ್ಲ

ಇ) ಜೂನ್–2004ರ ಅಂತ್ಯದವರೆಗೆ ರೂ.293.50 ಲಕ್ಷಗಳು ವೆಚ್ಚವಾಗಿದೆ.

661(882) : ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?